ಈ ಬ್ಯೂರೋಕ್ರಾಟಿಕ್ ಅವಾಂತರದಿಂದ ಅವರು ಲಂಡನ್ನಿಗೆ ಹೋಗಲಾಗಲಿಲ್ಲ. ನಿರಾಶರಾದರೂ ದೀಪಾ ಯಾರನ್ನೂ ದೂರಲು ಹೋಗಲಿಲ್ಲ. ಅತ್ತ ಲಂಡನ್ ಒಲಿಂಪಿಕ್ಸ್ ನಡೆದ ದಿನವೇ ಇತ್ತ ದೀಪಾ ಅವರನ್ನು ಭಾರತದ ರಾಷ್ಟ್ರಪತಿಗಳು 'ಅರ್ಜುನ ಪ್ರಶಸ್ತಿ' ನೀಡಿ ಗೌರವಿಸಿದರು!

42 ವರ್ಷ ವಯಸ್ಸಿನ ದೀಪಾ ಮತ್ತೆ ನಾಲ್ಕು ವರ್ಷಗಳಲ್ಲಿ ನಡೆಯಲಿದ್ದ ಒಲಿಂಪಿಕ್ಸ್‌ನತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿ, ತರಪೇತು ಮುಂದುವರೆಸಿದರು. ಅದೇ ಸಮಯಕ್ಕೆ ಅವರ ಹೆಣ್ಣು ದೇಹ ವಯೋಸಹಜವಾದ ಮುಟ್ಟು ನಿಲ್ಲುವ ಹಂತದತ್ತ ಸಾಗಿತ್ತು. ದೇಹದಲ್ಲಿ ಹಾರ್ಮೋನ್‌ಗಳ ಏರುಪೇರು. ಅದರೊಡನೆ ತರಪೇತು ಮಾಡುವುದು ಸುಲಭವಿರಲಿಲ್ಲ. ಪತಿ ಬಿಕ್ರಮ್, ದೀಪಾ ಅವರ ಬೆಂಬಲಕ್ಕೆ ನಿಂತು ಅವರ ತರಪೇತಿಗೆ ಕೈಜೋಡಿಸಿದರು.

2014ರಲ್ಲಿ ದಕ್ಷಿಣ ಕೊರಿಯಾದಲ್ಲಿ ನಡೆದ 'ಪ್ಯಾರ ಏಷಿಯನ್ ಗೇಮ್ಸ್'ನಲ್ಲಿ ಜಾವೆಲಿನ್ ಎಸೆತದಲ್ಲಿ ಬೆಳ್ಳಿ ಪದಕವನ್ನು ಗಳಿಸಿದರು. ದೀಪಾ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್'ನ 'ಪೀಪಲ್ ಆಫ್ ದಿ ಇಯರ್ 2014' ಪ್ರಶಸ್ತಿ ಪುರಸ್ಕಾರವನ್ನೂ ಪಡೆದರು. ಅವರು ಜಾವೆಲಿನ್ ಎಸೆತಕ್ಕೆ ಸಂಪೂರ್ಣ ತಯಾರಿ, ತರಪೇತು ನಡೆಸಿದ್ದರು. ಕಾರಣ, ಶಾಟ್‌ಪುಟ್ ಎಸೆತದಲ್ಲಿ ಅವರು ಕೆಲವು ಪದಕ ಗೆದ್ದಿದ್ದರೂ, ಶಾಟ್‌ಪುಟ್ ಎಸೆತ ಅವರ ದೇಹದ ಮೇಲೆ ಅಸಹನೀಯ ಪರಿಣಾಮವನ್ನು ಬೀರುತ್ತಿತ್ತು.

ಬರಲಿರುವ 2016ರ ಪ್ಯಾರಲಿಂಪಿಕ್ಸ್‌ನಲ್ಲಿ ಜಾವೆಲಿನ್ ಎಸೆತದಲ್ಲಿ ಪದಕ ಗೆಲ್ಲುವ ಎಲ್ಲ ತಯಾರಿ ಮತ್ತು ಆತ್ಮವಿಶ್ವಾಸ ಮೂಡಿದಾಗ, ಆಕೆಯ ಕ್ಯಾಟಗರಿಯಲ್ಲಿ ಜಾವೆಲಿನ್ ಎಸೆತವನ್ನೇ ತೆಗೆದುಹಾಕಿದ್ದು ಆಘಾತ ತರಿಸಿತ್ತು. ಜಾವೆಲಿನ್ ಬದಲಿಗೆ ಶಾಟ್‌ಪುಟ್ ಎಸೆತವನ್ನು ಬ್ರೆಜಿಲ್‌ನ ರಿಯೋದಲ್ಲಿ 2016ರಲ್ಲಿ ನಡೆಯುವ ಪ್ಯಾರಲಿಂಪಿಕ್ಸ್‌ಗೆ ಸೇರಿಸಿರುವುದಾಗಿ ಸುದ್ದಿ ಬಂದಿತು. ಮೂರು ವರ್ಷಗಳ ಕಠಿಣ ಶ್ರಮ ವ್ಯರ್ಥವಾಗಿತ್ತು. ಈಗ ಒಲಿಂಪಿಕ್ಸ್‌ಗೆ 'ಕ್ವಾಲಿಫೈ' ಆಗಲು ಶಾಟ್‌ಪುಟ್‌ನಲ್ಲಿ ಅಧಿಕ ಶ್ರಮ ಹಾಕಿ ತಯಾರಾಗಬೇಕಿತ್ತು. ಅವರ ದೈಹಿಕ ಸ್ಥಿತಿಯಲ್ಲಿ ಇದು ಸುಲಭವಿರಲಿಲ್ಲ. ಶಾಟ್‌ಪುಟ್ ಎಸೆತ ಆರಂಭಿಸಿದಾಗ, ಅವರಿಗೆ 'ಬವೆಲ್ ಮೂವ್‌ಮೆಂಟ್' ನಿಯಂತ್ರಿಸಲು ಆಗುತ್ತಿರಲಿಲ್ಲ. ಮಲ ಹೊರಗೆ ಬಂದು ಬಿಡುವುದು. ಪ್ರತಿ ಬಾರಿ ಭಾರದ ಶಾಟ್‌ಪುಟ್ ಎಸೆದಾಗ, ಮಲ ಇಲ್ಲವೇ ಮೂತ್ರ ವಿಸರ್ಜನೆಯಾಗಿ, ಡಯಪರ್ ಬದಲಿಸಬೇಕಾಗುತ್ತಿತ್ತು. ಅಂತಹ ಸ್ಥಿತಿಯಲ್ಲಿಯೂ ದೀಪಾ ಎಲ್ಲಿಲ್ಲದ ಶ್ರಮ ಹಾಕಿದರು. ತಾವು ರಿಯೋಗೆ ಇರುವ ಶಾಟ್‌ಪುಟ್ ಎಸೆತದ 'ಕ್ವಾಲಿಫಿಕೇಶನ್ ಮಾರ್ಕ್' 3.67 ಮೀಟರ್ ಅನ್ನು ಖಂಡಿತಾ ಮೀರುವೆನೆಂಬ ಆತ್ಮವಿಶ್ವಾಸ ಮೂಡಿತು.



ಆತ್ಮವಿಶ್ವಾಸವೇ ಮೈದಳೆದಂತೆ ಕಾಣಿಸುವ ದೀಪಾ

'ಟ್ರಯಲ್' ಸಮಯದಲ್ಲಿ ದೀಪಾ 4.48 ಮೀಟರ್ ಎಸೆದರು, ಎಲ್ಲರಿಗಿಂತ ಮೇಲೆ ಅವರಿದ್ದರು. ಖುಷಿಯಿಂದ ಮರುದಿನದ ಸುದ್ದಿಪತ್ರಿಕೆಯಲ್ಲಿ ತಮ್ಮ ಹೆಸರನ್ನು ನೋಡಲು ಕಾತರಿಸಿದಾಗ, ಅಲ್ಲಿ ಅವರ ಹೆಸರಿತ್ತು. ಆದರೆ ಅಲ್ಲಿ ಬರೆದ ತಲೆಬರಹವೇ ಬೇರೆ: 'ದೀಪಾ ಮಲ್ಲಿಕ್ ಟ್ರಯಲ್ ಫಲಿತಾಂಶದಲ್ಲಿ ಹಸ್ತಕ್ಷೇಪ ಮಾಡಿದ ಕಾರಣಕ್ಕೆ ಕೋರ್ಟಿಗೆ ಎಳೆಯಲ್ಪಟ್ಟಿದ್ದಾರೆ' ಎಂದಿತ್ತು! ಆಕೆಯ ಪ್ರತಿಸ್ಪರ್ಧಿ ಒಬ್ಬರು ಆಕೆಯ ಮೇಲೆ ನ್ಯಾಯಾಲಯದಲ್ಲಿ ದೂರು ಸಲ್ಲಿಸಿದ್ದರು.

ಗಾಲಿ ಕುರ್ಚಿಯಲ್ಲಿ ಕುಳಿತ ಅವರು 4.48 ಮೀಟರ್ ದೂರಕ್ಕೆ ಶಾಟ್‌ಪುಟ್ ಎಸೆದರು ಎಂದು ನಂಬಲು ಯಾರೂ ಸಿದ್ಧವಿರಲಿಲ್ಲ. ಇದು ಸಾಲದೆಂಬಂತೆ, 'ಹೇಟ್‌ಮೇಲ್' ಬಂದು ಸುರಿಯತೊಡಗಿತು. 'ಧಮ್ ಇದ್ದರೆ ರಿಯೋದಲ್ಲಿ ಎಸೆದು ತೋರಿಸು' ಎಂದಿತ್ತು ವ್ಯಂಗ್ಯದ ಮೊನಚಿನ ಮಿಂಚಂಚೆ. ರಿಯೋದಲ್ಲಿಯ ಒಲಿಂಪಿಕ್ಸ್‌ಗೆ ತಯಾರಾಗಬೇಕಿದ್ದ ಈ ಸಮಯವನ್ನು ದೀಪಾ ಕೋರ್ಟಿನಲ್ಲಿ ಕೇಸಿನೊಡನೆ ಗುದ್ದಾಡುವುದರಲ್ಲಿ ಕಳೆಯಬೇಕಾಯಿತು. ಕೇಸು ಮುಗಿಯದೆ ರಿಯೋಗೆ ಹೋಗುವುದೆಂತು? ಕಡೆಗೂ ರಿಯೋಗೆ



ದೀಪಾ ಅವರೊಂದಿಗೆ ಲೇಖಕಿ ನೇಮಿಚಂದ್ರ